ಶ್ರೀ ಬಿ. ನಾರಾಯಣಸ್ವಾಮಿ.—ಸ್ವಾಮಿ, ಮೈಸೂರು ರಾಜಧಾನಿಯಲ್ಲಿ ನೀರು ಸರಬರಾಜನ್ನು ಉತ್ತಮಪಡಿಸುವುದಕ್ಕೆ ನರಿಯಾದ ಯೋಜನೆಯನ್ನು ಶೀಘ್ರದಲ್ಲಿ ಮಾಡುವುದಕ್ಕಾಗುತ್ತದೆಯೆ ?

Mr. SPEAKER.—You please read the last sentence ; there is the answer.

ಶ್ರೀ ಬಿ. ನಾರಾಯಣಸ್ವಾಮಿ.—"ಈ ಯೋಜನೆಯು ಚೀಫ್ ಇಂಜನಿಯರವರ ಪರಿಶೀಲನೆಯಲ್ಲಿದೆ" ಎಂದು ಹೇಳುತ್ತೀರಿ. ಪರಿಶೀಲನೆಯಾಗಲು ಎಷ್ಟು ದಿವಸಬೇಕು? ಮಂಜೂರಾಗುವುದು ಯಾವಾಗ ?

ಶ್ರೀ ಟಿ. ಚನ್ನಯ್ಯ.—ಚೀಫ್ ಇಂಜನಿಯರು ಪರಿಶೀಲಿಸಿ ಸರ್ಕಾರಕ್ಕೆ ಕಳುಹಿಸಿದಮೇಲೆ ಯೋಚನೆ ಮಾಡುತ್ತೇವೆ.

ಶ್ರೀ ಬಿ. ನಾರಾಯಣಸ್ವಾಮಿ.—ಇದಕ್ಕೆ ಬೇಕಾದ ಹಣವನ್ನು 1954-55ನೆಯ ಸಾಲಿನ ಬಡ್ಜೆಟ್ಟಿನಲ್ಲೊ ದಗಿಸಿ ಮಂಜೂರುಮಾಡಲು ಅನುಕೂಲ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಅವರಿಂದ ಬಂದ ತಕ್ಷಣ ಎಸ್ಟಿಮೇಟ್ ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಬಿ. ನಾರಾಯಣಸ್ವಾಮಿ.—ಬಹಳ ದಿವಸಗಳಿಂದ ಇದು ಪೆಂಡಿಂಗ್ ಆಗಿಲ್ಲವೆ ! ಈ ರೀತಿ ಮುಂದುವರಿಸಿದರೆ ಈ ಕೆಲಸವಾಗಲು ಇನ್ನೂ ಎಷ್ಟು ಕಾಲಬೇಕು ?

Sri T. CHANNIAH.—As soon as the estimate is received from the Chief Engineer, Government will consider the question of sanctioning the scheme.

Sri B. NARAYANASWAMY.—Will the Chief Engineer be asked to send the scheme immediately ?

Sri T. CHANNIAH.—Yes.

Sri B. NARAYANASWAMY.—In that case, is it not possible for Government to include the amount under 54-55 budget ?

Sri T. CHANNIAH.—No avoidable delay will be allowed to occur at any stage. The estimate will be got as early as possible and the question examined.

Sri B. NARAYANASWAMY.—I want a promise from Government that this scheme will be included in the 54-55 budget.

Mr. SPEAKER.—The Hon'ble Minister has told you that it would be considered.

Sri B. NARAYANASWAMY.—It is in the stage of mere consideration for the last several years. That word 'consideration' should go. I want a promise from the Government that this scheme would be expedited and the amount included in the 54-55 budget.

Sri T. CHANNIAH.—The scheme will be expedited.

ಶ್ರೀ ಬಿ. ರಾಚಯ್ಯ.—ಮೈಸೂರು ಸಿಟಿಯಲ್ಲಿ ಯಾವಯಾವ ಪೊಹಲ್ಲಾಗಳಿಗೆ ಲಾರಿಗಳಲ್ಲಿ ಕುಡಿಯುವುದಕ್ಕೆ ನೀರನ್ನು ಸರಬರಾಜು ಮಾಡಲಾಗುತ್ತಿದೆ ?

Sri T. CHANNIAH.—I cannot answer this off hand.

Indigenous Systems of Medicine.

Q.—185. Sri G. PUTTASWAMY (Chikmagalur-Mudigere—Scheduled Castes).—

Will the Government be pleased to state :—

(*a*) whether they are aware of the recommendation of the National Planning Committee of India for the improvement of the indigenous systems of medicine;

(*b*) whether they have taken any steps for the application of scientific method for the investigation of indigenous systems of medicine with reference to maintenance and preservation of health and cure of diseases ;

(*c*) whether they have formulated any practical scheme of organisation for the improvement of the courses of studies in the Ayurvedic and Unani College at Mysore ?

A.—Sri T. CHANNIAH (Minister for Public Health and Local Self-Government).—

(*a*) Yes.
(*b*) Yes.
(*c*) Yes.

ಶ್ರೀ ಜಿ. ಪುಟ್ಟಸ್ವಾಮಿ.—"ಬ" ಭಾಗದ ಪ್ರಶ್ನೆಗೆ ಉತ್ತರವಾಗಿ 'ಹೌದು; ಕೈಕೊಂಡಿದ್ದೇವೆ' ಎಂದು ತಿಳಿಸಿದ್ದೀರಿ; ಇದಕ್ಕೆ ಸಂಬಂಧಪಟ್ಟ ಯೋಜನೆಯನ್ನು ಯಾವಾಗ ಕೈಗೊಳ್ಳುತ್ತೀರಿ?

ಶ್ರೀ ಟಿ. ಚನ್ನಯ್ಯ.—1955ರಲ್ಲಿ scheme implement ಮಾಡಬೇಕೆಂದು ಯೋಚಿಸಿದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಿ.—ಆ ಬಗ್ಗೆ ತಾವೇನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ಟಿ. ಚನ್ನಯ್ಯ.—ಕೇಂದ್ರ ಸರ್ಕಾರದ ಅಧಿಕಾರಿಯೊಬ್ಬರು ಬಂದು ಇದನ್ನು ಪ್ರಾರಂಭಿಸಿರುತ್ತಾರೆ ಈ ಬಗ್ಗೆ 1950ರಿಂದಲೂ ಕೊಂಚ ಮಟ್ಟಿಗೆ ಮೈಸೂರು ಸರ್ಕಾರದವರು ಕಾರ್ಯಕ್ರಮ ನಡೆಸುತ್ತಿದ್ದಾರೆ: ಅವರ main recommendations ಏನೆಂಬುದನ್ನು ತಿಳಿಸಲು ಕಾಲಾವಕಾಶ ಬೇಕಾಗುತ್ತದೆ.